ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಪರಿಶುದ್ಧ, ಪ್ರಾಮಾಣಿಕ ರಾಜಕಾರಣಿಗಳು ಎಲ್ಲಿ ಸಿಗುತ್ತಾರೆ?*




ಗೋರಿಗಳಲ್ಲಿ!

ಪಿ.ಎನ್.ಶ್ರೀವತ್ಸ, ಬೆಂಗಳೂರು
*ಮಠ; ಇದರ ನಿಜವಾದ ಅರ್ಥ?*
ಮತದ ಠಸ್ಸೆ ಒತ್ತುವ ಜಾಗ!

ಎಚ್.ಆರ್. ದೇಸಾಯಿ, ರಾಯಚೂರು
*ವಿಜ್ಞಾನ ಇಂಗ್ಲಿಷ್ ಭಾಷೆಯಲ್ಲಿ, ಜ್ಞಾನ ಸಂಪತ್ತು ಸಂಸ್ಕೃತ ಭಾಷೆಯಲ್ಲಿ. ಕನ್ನಡದಲ್ಲಿ...?*
ಕನ್ನಡವೂ ಸೇರಿ ಮೂರೂ ಭಾಷೆಗಳನ್ನು ಸೊಗಸಾಗಿ ಕೊಲ್ಲುವ ಎಫ್‌ಎಂ ರೇಡಿಯೋ!

ಪೇಂಟರ್ ಪಾಪು, ಸಂತೇಮರಹಳ್ಳಿ
*ಹುಡುಗ ಮತ್ತು ಹುಡುಗಿಯರು ಯಾವತ್ತೂ ಜೊತೆಗಿರಲು ಏಕೆ ಬಯಸುತ್ತಾರೆ?*
ಮುದುಕ-ಮುದುಕಿಯರಿಗೆ ಗತವೈಭವದ ನೆನಪು ಮೂಡಿಸಲು!

ಎಂ.ಎಸ್. ಗುರುರಾಜಾಚಾರಿ, ಬಳ್ಳಾರಿ
*ಪ್ರಾಣಿಗಳು ರಾಜಕೀಯಕ್ಕೆ ಬಂದರೆ?*
ಹಾಗಾದರೆ... ಈಗ ಇರುವುದು ಅವಲ್ಲ ಎನ್ನುವಿರೇನು?

ರಮೇಶ್, ಹನುಮನಾಳು
*ನಿಮ್ಮ ಹೆಸರು ನಮ್ಮ ಮನದಲ್ಲಿದೆ ಅಂತ ಆಮಂತ್ರಣಪತ್ರದಲ್ಲಿ ಬರೆದಿದ್ದರೂ ನಿಮ್ಮ ಹೆಸರೇನು ಅಂತಾರಲ್ಲಾ ರಾಮ್?*
ಪಾಪ! ಅವರ ಮನಸ್ಸಿಗೂ, ನೆನಪಿಗೂ ಇದ್ದ ಲಿಂಕ್ ಕಟ್ ಆಗಿಬಿಟ್ಟಿರಬೇಕು!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ
*ನಗುವ ಹೆಣ್ಣು, ಅಳುವ ಗಂಡನ್ನು ನಂಬಬಾರದಂತೆ, ಏಕೆ?*



ಯಡ್ಡಿ, ಶೋಭಾರನ್ನು ಕಂಡೂ ಈ ಪ್ರಶ್ನೆ ಕೇಳುವುದೇ... ಅಕಟಕಟಾ!

ಡಿ.ಎಲ್. ಶ್ವೇತಾ, ಚನ್ನಗಿರಿ
*ಭೂಮಿಯ ಮುಕ್ಕಾಲು ಭಾಗ ನೀರಿದ್ದರೂ ಮನುಷ್ಯನಿಗೆ ನೀರಿನ ಹಾಹಾಕಾರವೇಕೆ?*
ಆ ನೀರಿನಲ್ಲಿನ ಮುಕ್ಕಾಲು ಭಾಗದಲ್ಲಿ ತಿಮಿಂಗಲಗಳು, ಮೊಸಳೆಗಳು, ಮೀನುಗಳು ಈಜುವಾಗ ಬೆವರಿ ಕುಡಿಯಲಾರದಷ್ಟು ಉಪ್ಪುಪ್ಪಾಗಿರುವುದರಿಂದ!

ಎ. ರಾಜ್‌ಕುಮಾರ್, ಹಿರಿಯೂರು
*ಕುರಿ ಕೊಬ್ಬಿದರೆ ಕುರುಬನಿಗೆ ಲಾಭ; ಮಾನವನೇ ಕೊಬ್ಬಿ ಮೆರೆದಾಗ?*
ಲಿಪೋಸಕ್ಷನ್ ಮಾಡುವವರಿಗೆ, ಹೃದಯವೈದ್ಯರಿಗೆ ಲಾಭ!

ಎನ್.ವಿ.ಶ್ರೀನಿವಾಸ್, ಮೈಸೂರು
*ಯೋಚನೆ ಎಂಬ ಪದ ಹುಟ್ಟಿದ್ದು ಯಾವಾಗ?*
ನೆಮ್ಮದಿ ಎಂಬ ಪದ ಮರೆತುಹೋದಾಗ!

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಟಿವಿ ಜಾಹಿರಾತುಗಳಲ್ಲಿ ಬರುವ ಸುಂದರಿಯರ ನುಡಿಮುತ್ತುಗಳನ್ನು ನಂಬಬೇಕಾ, ಇಲ್ಲ ಮರೆಯಬೇಕಾ?*
ಕೇಳಿಸಿಕೊಳ್ಳಲೂ ಹೋಗಬೇಡಿ; ಚಂದದ ಹುಡುಗಿಯರಲ್ಲವೇ... ಟಿವಿ ಮ್ಯೂಟ್ ಮಾಡಿ, ನೋಡಿ, ಆನಂದಿಸಿ!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ
*ಕಾಲ ನೀಡುವ ಶಿಕ್ಷೆ ಮನುಷ್ಯನಿರ್ಮಿತ ಕಾನೂನಿಗಿಂತಲೂ ಬಲವಾದುದು ಎಂದೇಕೆ ಹೇಳುವರು?*
ಮನುಷ್ಯ ತಲೆಬೋಳಿಸುವ ಶಿಕ್ಷೆ ನೀಡಿದರೂ ಮತ್ತೆ ಕೂದಲು ಬರುತ್ತದೆ; ಕಾಲ ಬೋಳಿಸಿದರೆ ಪರ್ಮನೆಂಟ್ ಬೋಳು!

ಹಾಡ್ಯ ಬಿ. ಜಯಾನಂದ, ಮೈಸೂರು
*ಜೀವನ ಒಂದು ಆಟವಂತೆ; ಕ್ರಿಕೆಟ್ಟೋ, ಫುಟ್‌ಬಾಲೋ, ಕಬಡ್ಡಿಯೊ?*
ಭಾರತೀಯರದಾದರೆ ಪರಸ್ಪರರ ಕಾಲೆಳೆಯುವ ಕಬಡ್ಡಿ!

ಜಿ.ಪ್ರದೀಪಕುಮಾರ, ಹೂವಿನಹಡಗಲಿ
*ಉಪದೇಶ ಮಾಡುವುದಕ್ಕೂ, ಉಪದೇಶ ಪಾಲಿಸುವುದಕ್ಕೂ ಏನು ವ್ಯತ್ಯಾಸ?*
ಉಪದೇಶ ಮಾಡಿದವನು ತಂಪಾಗಿರುತ್ತಾನೆ, ಪಾಲಿಸಿದವನಿಗೆ ಹನ್ನೊಂದು ಅಕ್ಷೋಹಿಣಿ ಸೈನ್ಯ ಕೊಲ್ಲುವಷ್ಟು ತಲೆ ಕೆಡುತ್ತದೆ ಎಂಬುದಕ್ಕೆ ಕೃಷ್ಣಾರ್ಜುನರೇ ಸಾಕ್ಷಿ!

ಅಮರಯ್ಯ ಪತ್ರಿಮಠ, ಶೋರಾಪೂರ
*ಕೆಲವರು ಕಣ್ಣಿದ್ದೂ ಕುರುಡರಂತೆ ನಟಿಸುತ್ತಾರಲ್ಲಾ...?*
ಹೆಂಡತಿಯೊಡನೆ ವಾಕಿಂಗ್ ಹೋದಾಗ ಪ್ರೇಯಸಿ ಎದುರಾದರೆ ಇನ್ನೇನು ಮಾಡಲಾದೀತು ಬಿಡಿ!

## ಬಹುಮಾನಿತ ಪ್ರಶ್ನೆ

ಮೊಳಕಾಲ್ಮೂರು ಸುರೇಶ್, ಬಳ್ಳಾರಿ
*ಅಲ್ರಪ್ಪೋ, ಪಿರಮಿಡ್‌ಗಳಲ್ಲಿ ಮಮ್ಮಿಗಳನ್ನು ಇಡುತ್ತಾರಂತೆ; ಡ್ಯಾಡಿಗಳನ್ನು ಎಲ್ಲಿಡುತ್ತಾರೆ?*
ಕಾಂಪೌಂಡಿನಿಂದ ಹೊರಗೇ... ಮಮ್ಮಿಗಳು ಗರ್ಲ್‌ಗಳಾಗಿದ್ದ ದಿನದಿಂದಲೂ ಡ್ಯಾಡಿಗಳು ಇದ್ದದ್ದೇ ಅಲ್ಲಿ!

ಎ.ಕೆ. ಪಟ್ಟಾಭಿ, ಬೆಂಗಳೂರು
*ಬೈ ಒನ್, ಟೇಕ್ ಟೂ ಎಂದು ಮಾರಿದರೆ ಅಂಗಡಿಯವನಿಗೆ ತುಂಬಾ ನಷ್ಟ ಅಲ್ಲವೇ?*
ಇನ್ನುಮುಂದೆ ಅಂತಹ ಕಡೆ ಹೋದಾಗ ನೀವು ಬೈ ಮಾಡಿ; ಟೇಕ್ ಟೂ ಬಗ್ಗೆ ನನಗೆ ಬಿಡಿ!

ಅನಿತಾ ನರೇಶ್ ಮಂಚಿ, ಮಂಗಳೂರು
*ಹೆಣ್ಣು ಹೆಂಗಸು ಅಂತ ಹೇಳೋದ್ಯಾಕೆ? ಹೆಂಗಸು ಅಂದರೆ ಹೆಣ್ಣೇ ಅಲ್ಲವೇ?*
ಹಾಗೆಲ್ಲಾ ಆಕಾರ ನೋಡಿ ಪ್ರಕಾರ ನಿರ್ಧರಿಸಕ್ಕಾಗಲ್ಲ; ಜಯಲಲಿತಾ, ಇಂದಿರಾಗಾಂಧಿ ಹೆಣ್ಣೇ ಆದರೂ ಗಂಡಿಗಿಂತಲೂ ಗಂಡು!

ಎಂ.ಬಿ. ರಂಗಪ್ಪಶೆಟ್ಟಿ, ಬೆಂಗಳೂರು
*ನಾವು ಕನಸಿನಲ್ಲಿ ನೋಡುವ ದೃಶ್ಯಗಳನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುವಂತಿದ್ದಿದ್ದರೆ?*



ಕ್ಲಿಕ್ ಮಾಡಲು ಬಟನ್ ಹುಡುಕುವ ಹೊತ್ತಿಗೆ ಎಚ್ಚರವಾಗಿಬಿಡುತ್ತಿತ್ತು!

ಪಿ.ಜೆ. ರಾಘವೇಂದ್ರ, ಮೈಸೂರು
*ಪರೀಕ್ಷೆಯಲ್ಲಿ ಕೇಳುವ ಪ್ರಶ್ನೆಗಳಿಗೆ ಸಹಸ್ರಾರು ಜನ ಉತ್ತರಿಸುತ್ತಾರೆ. ಆದರೆ ನಿಮ್ಮಲ್ಲಿ ಸಹಸ್ರಾರು ಓದುಗರು ಕೇಳುವ ಪ್ರಶ್ನೆಗೆ ನೀವೊಬ್ಬರೇ ಉತ್ತರಿಸುತ್ತಿದ್ದೀರಲ್ಲಾ ಸಾರ್...?*
ಆ ತಾತ್ಕಾಲಿಕ ಪರೀಕ್ಷೆಗಳು ಅವರಿಗೆ ರೌರವ; ಈ ನಿರಂತರ ಪರೀಕ್ಷೆ ನನಗೆ ಸಂದ ಗೌರವ!

ವಿ. ಹಮೀದ್, ವಿಟ್ಲ
*ಕಾರ್ಯಕ್ರಮಕ್ಕೆ ರಾಜಕಾರಣಿಗಳನ್ನು ಬ್ಯಾಂಡು ವಾದ್ಯಗಳಲ್ಲಿ ಕರೆತರುವುದೇಕೆ?*
ಸತ್ತವರು ಅಥವಾ ಹಾಗಿರುವವರನ್ನು ಕರೆತರಲು ಈ ಸಂಪ್ರದಾಯ ನಮ್ಮಲ್ಲಿ ಜಾರಿಯಲ್ಲಿದೆ!

■ ರಾಮ್